**ದಿ: 31-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಎ ಟಿ ಬಿ ವಕೀಲರಿಂದ: -**

1. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನಗೆ ಸಹಿ ಮಾಡಲು ಬರುತ್ತದೆ. ಸೋಮ ಕಾರದೊಡ್ಡ ಕೆ ಇ ಬಿ ರಸ್ತೆ ದೇವದುರ್ಗದಿಂದ ದಕ್ಷಿಣ ದಿಕ್ಕಿಗೆ ಬರುತ್ತದೆ. ನನಗೆ ದೇವದುರ್ಗ ಮತ್ತು ಶಂಕ್ರಬಂಡಿ ಸೀಮಾದಲ್ಲಿ ಜಮೀನುಗಳು ಇರುತ್ತವೆ. ಈ ದಾವೆಯನ್ನು ಸಾಜೀದ್ ಮತ್ತು ಶೌಕತ್ ಇವರು ಅವರ ತಂಗಿಯರ ಮೇಲೆ ಜಮೀನುಗಳಲ್ಲಿ ಪಾಲು ವಿಭಾಗಕ್ಕಾಗಿ ಮಾಡಿರುತ್ತಾರೆ. ಎಷ್ಟು ಜನರ ಮೇಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯರು 3 ಜನ ಅಣ್ಣ ತಮ್ಮಂದಿರು, ವಾದಿಯರ ಇಬ್ಬರು ತಂಗಿಯರ ಹೆಸರು ನನಗೆ ಗೊತ್ತಿಲ್ಲ. ವಾದಿಯರ ತಂದೆಯ ಹೆಸರು ಕಾಸಿಂಸಾಬ ಅಂತಾ ಇದ್ದು ಅವರ ತಾಯಿ ಹೆಸರು ನನಗೆ ಗೊತ್ತಿಲ್ಲ. ವಾದಿಯರ ತಂದೆ ತೀರಿಕೊಂಡಿರುತ್ತಾರೆ. ವಾದಿಯರು ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ.

2. ದಾವಾ ಆಸ್ತಿಗಳು ಒಂದು ಮನೆ ಮತ್ತು 02 ಎಕರೆ 14 ಗುಂಟೆ ಹೊಲ ಇರುತ್ತದೆ. 02 ಎಕರೆ 14 ಗುಂಟೆ ಹೊಲ ಯಾವ ಸೀಮೆಯಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಮನೆ ಯಾವ ವಾರ್ಡ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಆದರೆ ಶಾಂತಿನಗರದಲ್ಲಿರುತ್ತದೆ. ದಾವಾ ಜಮೀನು ಮತ್ತು ಮನೆ ಆಜುಬಾಜು ನನಗೆ ಸೇರಿದ ಜಮೀನು ಮತ್ತು ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಮಹ್ಮದೀಯ ಕಾನೂನಿನ ಬಗ್ಗೆ ನನಗೆ ಗೊತ್ತಿಲ್ಲ. ಮಹ್ಮದೀಯ ಕಾನೂನಿನ ಪ್ರಕಾರ ಭಾಗ ಬರುತ್ತದೆ ಎಂದು

ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ವಾದಿಯರು ಭಾಗ ಆಗಿರುವುದಿಲ್ಲ ಎಂದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಒಂದೇ ಊರಿನವರಾಗಿರುವುದರಿಂದ ಗೊತ್ತಾಗಿರುತ್ತದೆ ಎನ್ನುತ್ತಾರೆ. ದಾವಾ ಜಮೀನು ಮತ್ತು ಮನೆ ಮೂಲವಾಗಿ ಅವರ ತಂದೆ ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ದಾವಾ ಜಮೀನು ಯಾವ ಇಸ್ವಿಯಿಂದು ಯಾರಿಂದ ಖರೀದಿ ಮಾಡಿದ್ದಾರೆ ಮತ್ತು ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ